> ‘ಎರಡೇ ನಿಮಿಷದಲ್ಲಿ ಉಡುಪು ಬದಲಿಸಬೇಕೆಂದು ವಿಧಿಸುತ್ತಿದ್ದ ಆ ರ್‍ಯಾಗಿಂಗ್ ತನಗೆ ರೆಕಾರ್ಡ್ ಟೈಮ್‌ನಲ್ಲಿ ಉಡುಪು ಬದಲಿಸುವುದನ್ನು ಕಲಿಸಿತ್ತು.’
>
> -ಗುಂಜನ್ ಸಕ್ಸೇನಾ




‘ನಿಮ್ಮ ಕನಸುಗಳಿಗೆ ರೆಕ್ಕೆ ಕಟ್ಟುವೆವು’ ಎಂದು ಘೋಷಿಸಿ, ವಾಯುಪಡೆ ಮಹಿಳೆಯರನ್ನು ಆಹ್ವಾನಿಸಿತ್ತು

## ಸೇನೆಯ ಮೊದಲ ಮಹಿಳಾ ತಂಡ

1992ರಲ್ಲಿ ಭಾರತೀಯ ಸೇನೆ ಮಹಿಳೆಯರಿಗೆ ಬಾಗಿಲು ತೆರೆಯಿತು. ‘ನಿಮ್ಮ ಕನಸುಗಳಿಗೆ ರೆಕ್ಕೆ ಕಟ್ಟುವೆವು’ (Giving Wings to Your Dreams) ಎಂದು ಘೋಷಿಸಿ ಮಹಿಳೆಯರನ್ನು ವಾಯುಸೇನೆಗೆ ಆಹ್ವಾನಿಸಿತು. ಅಖಿಲ ಭಾರತ ಮಟ್ಟದಲ್ಲಿ ಪುರುಷರೊಡನೆ ಸ್ಪರ್ಧಿಸಿ, ಮಹಿಳೆಯರು ಆಯ್ಕೆಯಾದರು. ಸೆಪ್ಟೆಂಬರ್ 2, 1994ರಂದು ಸುದ್ದಿಪತ್ರಿಕೆಗಳು ‘ವಾಯುಪಡೆಗೆ ಶೀಘ್ರ ಮಹಿಳಾ ಪೈಲೆಟ್‌ಗಳ ತಂಡ’ ಎಂದು ಸಾರಿದವು. ‘ಏಳು ಮಂದಿ ತರುಣಿಯರು ರಾಷ್ಟ್ರದ ಮಿಲಿಟರಿ ವಾಯುಯಾನದಲ್ಲಿ ಚರಿತ್ರೆ ನಿರ್ಮಿಸುವ ಹೊಸಿಲಲ್ಲಿದ್ದಾರೆ’ ಎಂದು ಬೆಂಗಳೂರಿನ ಪತ್ರಿಕೆಗಳು ಉತ್ಸಾಹದಿಂದ ಬರೆದವು. ಕಾರಣ, ಆ ಹೆಣ್ಣುಮಕ್ಕಳ ತರಪೇತು ಬೆಂಗಳೂರಿನಲ್ಲಿ ನಡೆಯುತ್ತಿತ್ತು.

ಆ ದಿನ ಚಂಡೀಗಢದ ಫ್ಲೈಟ್ ಕ್ಯಾಡೆಟ್ ಹರಿತಾ ಕೌರ್ ದೆಯೋಲ್, ಬೆಂಗಳೂರಿನ ಯಲಹಂಕ ಏರ್‌ಫೋರ್ಸ್ ಸ್ಟೇಶನ್‌ನಲ್ಲಿ, ವಾಯುಪಡೆಯ ಆವ್ರೋ – ಬೃಹತ್ ಸಾರಿಗೆ ವಿಮಾನವನ್ನು ಹಾರಿಸಿದಾಗ, ವಿಮಾನವನ್ನು ಏಕಾಂಗಿಯಾಗಿ ಹಾರಿಸಿದ ವಾಯುಪಡೆಯ ಮೊಟ್ಟಮೊದಲ ಮಹಿಳಾ ಪೈಲೆಟ್ ಅವರಾಗಿದ್ದರು. ಅವರ ಹಿಂದೆಯೇ ಆಕೆಯ ಸಹಪಾಠಿಗಳಾದ ದಿಲ್ಲಿಯ ಫ್ಲೈಟ್ ಕೆಡೆಟ್ ಅರ್ಚನಾ ಕಪೂರ್ ಮತ್ತು ಕೇರಳದ ಫ್ಲೈಟ್ ಕೆಡೆಟ್ ಬಿಂದು ಸೆಬಾಸ್ಟಿಯನ್ ಅದೇ ದಿನ ಏಕಾಂಗಿಗಳಾಗಿ ಆವ್ರೋ ವಿಮಾನವನ್ನು ಚಲಾಯಿಸಿದರು.

ಪ್ರಥಮ ತಂಡದಲ್ಲಿ ಇದ್ದ ಉಳಿದ ನಾಲ್ವರು ತರುಣಿಯರೆಂದರೆ ಭೂಪಾಲದ ಪ್ರಿಯಾ ನಲಗುಂದ್‌ವಾರ್, ಮುಂಬಯಿಯ ಪಮೇಲಾ ರಾಡ್ರಿಕ್ಸ್, ದಿಲ್ಲಿಯ ಅನಿತಾ ಸಿನ್ಹ ಮತ್ತು ಕೇರಳದ ಪ್ರಿಯಾ ಪಾಲ್. ಮೊದಲ ತಂಡದ ಮಹಿಳೆಯರಲ್ಲಿ ಪ್ರಿಯಾ ಪಾಲ್ ಅವರನ್ನು ನಾನು ಭೆಟ್ಟಿಯಾಗಿದ್ದೆ. ಆಗಲೇ ಆ ಎಲ್ಲ ಹೆಣ್ಣುಮಕ್ಕಳು ಸೇನೆಯ ಕುಟುಂಬಗಳಿಂದ ಬಂದವರಲ್ಲ; ಅವರಲ್ಲಿ ಅನೇಕರು ಅಪ್ಪಟ ಹಾರುವ ಅಭಿಲಾಷೆಯಿಂದ ವಾಯುಪಡೆಯನ್ನು ಸೇರಿದ್ದರು ಎಂದು ಅರಿವಾಗಿತ್ತು.

ಅದೇ ಪ್ರಥಮ ತಂಡದಲ್ಲಿ ಮತ್ತಿಬ್ಬರು ಮಹಿಳಾ ಪೈಲೆಟ್‌ಗಳಿದ್ದರು. ಅವರು ಹೆಲಿಕಾಪ್ಟರ್ ಪೈಲೆಟ್‌ಗಳಾದ ಚೆರಿಲ್ ದತ್ತಾ ಮತ್ತು ಸಿಮ್ರನ್ ಸೋದಿ. ಒಟ್ಟು ಒಂಬತ್ತು ಮಹಿಳೆಯರು ವಾಯುಪಡೆಯ ಮಹಿಳಾ ಪೈಲೆಟ್‌ಗಳ ಪ್ರಥಮ ತಂಡವಾಗಿ ಚರಿತ್ರೆ ನಿರ್ಮಿಸಿದರು. (ಗುಂಜನ್ ಸಕ್ಸೇನಾ ಮತ್ತು ಶ್ರೀವಿದ್ಯಾ ರಾಜನ್, ನಾಲ್ಕನೇ ಬ್ಯಾಚಿನಲ್ಲಿ ಪ್ರವೇಶಿಸಿದ ಮಹಿಳೆಯರು). ಅಂದು (1994ರಲ್ಲಿ) ಯಲಹಂಕದ ವಾಯುಪಡೆ ತರಪೇತು ಕೇಂದ್ರದ ಕಮಾಂಡಿಂಗ್ ಏರ್ ಆಫೀಸರ್, ಏರ್ ಕಮೋಡೋರ್ ಪಿ.ಎ.ಆರ್. ಕುಮಾರ್ ಆ ಮಹಿಳಾ ಪೈಲೆಟ್‌ಗಳ ನಿರ್ವಹಣೆಯನ್ನು ಶ್ಲಾಘಿಸಿದ್ದರು.

ಪ್ರಥಮ ಮಹಿಳಾ ಪೈಲೆಟ್‌ಗಳ ತಂಡದಲ್ಲಿದ್ದ ಚೆರಿಲ್ ದತ್ತಾ ವಾಯುಪಡೆಯಲ್ಲಿ ಹೆಲಿಕಾಪ್ಟರ್ ಹಾರಿಸಿದ ಪ್ರಥಮ ಮಹಿಳೆ. ಅವರ ತಂದೆ ನಮ್ಮ ವಿಮಾನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ತಮ್ಮ ಮಗಳ ಸಾಧನೆಯ ಬಗ್ಗೆ ಅವರಿಗೆ ಹೆಮ್ಮೆ ಇತ್ತು. ಆಗೆಲ್ಲ, ಯಾರು ಪ್ರಥಮ ಎಂಬುದು ಅಷ್ಟು ಮುಖ್ಯವಿರಲಿಲ್ಲ. ಪುರುಷರ ಪೌರುಷದ ರಂಗವಾದ ವಾಯುಪಡೆಯಲ್ಲಿ, ಹಾರಾಟದ ಕೆಲಸಕ್ಕೆ ಸೇರಿದ ೯ ಒಂಬತ್ತು ಹೆಣ್ಣುಮಕ್ಕಳೂ ನಮ್ಮ ಎದೆಯನ್ನು ಅಭಿಮಾನದಿಂದ ಉಬ್ಬಿಸಿದ್ದರು. ಆದರೆ ನಮ್ಮ ವೈಮಾನಿಕ ರಂಗದಾಚೆಗೆ ನಾನು ಯಾರಲ್ಲಿಯಾದರೂ ಚೆರಿಲ್ ದತ್ತಾ ಅವರ ಹೆಸರು ಹೇಳಿದರೆ, ಆಕೆ ಯಾರು ಎಂದು ಬಹುಪಾಲು ಜನರಿಗೆ ಗೊತ್ತಿರುತ್ತಿರಲಿಲ್ಲ. ಆಕೆಯ ತಂಗಿ ಸೌಂದರ್ಯ ರಾಣಿಯಾಗಿ ಚಲನಚಿತ್ರ ತಾರೆಯಾದಾಗ, ಚೆರಿಲ್ ದತ್ತ ಅವರನ್ನು ‘ಲಾರಾ ದತ್ತ ಅವರ ಅಕ್ಕ’ ಎಂದು ಪತ್ರಿಕೆಯಲ್ಲಿ ಉಲ್ಲೇಖಿಸುವ ವಿಪರ್ಯಾಸವನ್ನೂ ಕಂಡಿದ್ದೆ!

ನಾವು ತಿಳಿಯಬೇಕಿದೆ ಮುಗಿಲು ಮುಟ್ಟಿದ ದಿಟ್ಟೆಯರನ್ನು; ಚಲನಚಿತ್ರದ ಪಾತ್ರದಾಚೆ ದಿಟವಾದ ಗುಂಜನ್ ಸಕ್ಸೇನಾ ಅವರ ಪರಿಚಯದ ಮೂಲಕ ವಾಯುಪಡೆಗೆ ಪ್ರವೇಶಿಸಿದ ಆರಂಭದ ಮಹಿಳೆಯರ ಅನುಭವಗಳನ್ನು, ಸಾಹಸವನ್ನು